ಓಎಸ್. 266/2015 ಡಿಡಬ್ಲ್ಯೂಃ2

ದಿನಾಂಕಃ **19.12.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಜೆ ಪಿ ವಕೀಲರಿಂದಃ

ವಾದಿಯು ದಾವಾ ಸ್ವತ್ತನ್ನು ನೊಂದಣಿ ಕ್ರಯಪತ್ರದ ಮೂಲಕ ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿ ಮಾಡಿರಬಹುದು ಎಂದು ನುಡಿಯುತ್ತಾರೆ. 2001 ರಲ್ಲಿ ದಾವಾ ಸ್ವತ್ತು ಅನ್ಯಕ್ರಾಂತವಾಗದೆ ವ್ಯವಸಾಯದ ಜಮೀನು ಆಗಿತ್ತು ಎಂದರೆ ಸಾಕ್ಷಿ ಆ ಕುರಿತು ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಜಮೀನಿನ ಒಟ್ಟು ವಿಸ್ತೀರ್ಣ 2 ½ ಗುಂಟೆ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನು ನಿಪಿ 17 ರಂತೆ ದಿಃ22.05.1997 ರಂದು ವ್ಯವಸಾಯೇತರ ಜಮೀನಾಗಿ ಪರಿವರ್ತನೆಗೆ ಆದೇಶವಾಗಿರುತ್ತದೆ ಎಂದರೆ ಸರಿ. ತದನಂತರದಲ್ಲಿ ಸದರಿ ಜಮೀನು ನಗರಸಭೆ ವ್ಯಾಪ್ತಿಗೆ ಒಳಪಟ್ಟಿರುತ್ತದೆ ಎಂದರೆ ಸರಿ. ದಿಃ06.11.2003 ರಲ್ಲಿ ನಗರಸಭೆಯವರು ನಿಪಿ 4 ರಂತೆ ಖಾತೆ ಬದಲಾವಣೆಯ ಆದೇಶ ಮತ್ತು ಹಿಂಬರಹ ನೀಡಿರುತ್ತಾರೆ ಎಂದರೆ ಸರಿ. ಸದರಿ ಆದೇಶದಲ್ಲಿ ಅಸ್ಸೆಸ್ಮೆಂಟ್ ಸಂಖ್ಯೆ 1378/1378 ವಿಸ್ತೀರ್ಣ 63x42.8 ಅಡಿ ಎಂದು ಕಾಣಿಸಲಾಗಿರುತ್ತದೆ ಎಂದರೆ ಸರಿ. ನಿಪಿ 7 ರಂತೆ ಸದರಿ ಆಸ್ತಿಯು ಶ್ರೀರಾಮ್ ಲೇಔಟ್ ನಲ್ಲಿ ಬರುತ್ತದೆ ಎಂದು ಕಾಣಿಸಲಾಗಿದೆ ಎಂದರೆ ಸರಿ. ನಮ್ಮ ಕಚೇರಿಯಿಂದ ವಾದಿಯ ಹೆಸರಿಗೆ ನಿಪಿ 14 ರಂತೆ ಇ-ಸ್ವತ್ತು ನೀಡಲಾಗಿರುತ್ತದೆ ಎಂದರೆ ಸರಿ. ಈ ಎಲ್ಲಾ ದಾಖಲೆಗಳ ಆಧಾರದ ಮೇಲೆ ವಾದಿ ದಾವಾ ಸ್ವತ್ತಿನಲ್ಲಿ ಸ್ವಾಧೀನತೆ ಹೊಂದಿದ್ದಾರೆ ಎಂದರೆ ಸರಿ. ಅದರಂತೆ ವಾದಿಯು ಕಂದಾಯ ಪಾವತಿ ಮಾಡುತ್ತಿದ್ದಾರೆ ಎಂದರೆ ಸರಿ.

ವ್ಯಕ್ತಿಯ ಖಾಸಗಿ ಸ್ವತ್ತಿನಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ಮೊದಲು ಸ್ವತ್ತಿನ ಮಾಲೀಕರಿಗೆ ಮತ್ತು ಸ್ವಾಧೀನದಾರರಿಗೆ ನೋಟೀಸ್ ಜಾರಿ ಮಾಡಬೇಕು ಎಂದರೆ ಸರಿ. ಸಾಕ್ಷಿಗೆ ಒಂದು ನಕಾಶೆಯನ್ನು ತೋರಿಸಿದ್ದು ಸದರಿ ನಕಾಶೆ ತಮ್ಮ ಕಚೇರಿಯದ್ದು ಎಂದು ಒಪ್ಪಿಕೊಂಡಿದ್ದರಿಂದ ಅದನ್ನು ನಿಪಿ 28 ಎಂದು ಗುರುತಿಸಲಾಯಿತು. ದಾವಾ ಸ್ವತ್ತಿನಲ್ಲಿ ಅಭಿವೃದ್ಧಿ ಕಾರ್ಯಕ್ಕಾಗಿ ಈ ನಕಾಶೆಯನ್ನು ತಯಾರಿಸಲಾಗಿರುತ್ತದೆ ಎಂದರೆ ಸರಿಯಲ್ಲ. ನಿಸಿ1 ನ್ಯಾಯಾಲಯದ ನಿಯೋಗಿಯವರ ವರದಿಯಲ್ಲಿ ಕ್ರಮ ಸಂಖ್ಯೆ 2 ರಲ್ಲಿ ದಾವಾ ಸ್ವತ್ತಿನಲ್ಲಿ 3 ಅಡಿ ಅಗಲ ಟ್ರಂಚ್ ತೆಗೆದು ಪೈಪನ್ನು ಹಾಕಿ ಪುನಃ ಮಣ್ಣಿನಿಂದ ಮುಚ್ಚಿರುವ ಸಾಧ್ಯತೆ ಇದ್ದು ಒಟ್ಟು ವಿಸ್ತೀರ್ಣ 189 ಚದುರ ಅಡಿ ಇದೆ ಎಂದು ಬರೆಯಲಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಗರಸಭೆ ಅಧಿಕಾರಿಗಳು ಸದರಿ ಕಾಮಗಾರಿ ಕೈಗೊಂಡಿರುವುದಿಲ್ಲ ಮತ್ತು ನಗರಸಭೆಯ ಅಧಿಕಾರಿಗಳ ಸಮಕ್ಷಮ ನಿಸಿ 1 ನ್ನು ತಯಾರಿಸಿಲ್ಲ ಎಂದು ನುಡಿಯುತ್ತಾರೆ.

ನಗರಸಭೆಯವರಿಗೆ ನ್ಯಾಯಾಲಯದ ನಿಯೋಗಿಗಳು ನೋಟೀಸ್ ನೀಡಿದ್ದರು ಎಂದರೆ ಸರಿಯಲ್ಲ. ಉದ್ದೇಶಪೂರ್ವಕವಾಗಿ ನಗರಸಭೆಯ ಅಧಿಕಾರಿಗಳು ಸ್ಥಳದಲ್ಲಿ ಹಾಜರಿರಲಿಲ್ಲ ಎಂದರೆ ಸರಿಯಲ್ಲ.

ನಿಸಿ 1ವರದಿಯ ಕ್ರಮ ಸಂಖ್ಯೆ3 ರಲ್ಲಿ 6 ಅಡಿ ಅಗಲ, 378 ಚದುರ ಅಡಿಯ ಟ್ರಂಚನ್ನು ಚರಂಡಿ ನಿರ್ಮಾಣಕ್ಕಾಗಿ ಕೊರೆಯಲಾಗಿದ್ದು ಸಿಮೆಂಟ್ ಮಾಡಿರುವುದಿಲ್ಲ ಎಂದು ಕಾಣಿಸಲಾಗಿದೆ ಎಂದರೆ ಸರಿ. ಸದರಿ ಕಾಮಗಾರಿಯನ್ನು ನಗರಸಭೆಯವರೆ ಮಾಡಿದ್ದು ಕಾಮಗಾರಿ ಪ್ರಾರಂಭಿಸುವ ಮೊದಲು ವಾದಿಗೆ ನೋಟೀಸ್ ಜಾರಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ದಿನಾಂಕಃ 21.04.2016 ರಂದು ಮಾಹಿತಿ ಹಕ್ಕು ಕಾಯಿದೆ ಅಡಿ ನೀಡಿದ ಮಾಹಿತಿಯನ್ನು ತೋರಿಸಿದ್ದು ಸಾಕ್ಷಿ ತಮ್ಮ ಕಚೇರಿಯಿಂದ ನೀಡಲಾದ ಮಾಹಿತಿ ಎಂದು ಒಪ್ಪಿಕೊಂಡಿದ್ದರಿಂದ ದಾಖಲೆಯನ್ನು ನಿಪಿ 29 ಎಂದು ಗುರುತಿಸಲಾಯಿತು. ನನ್ನ ಮುಖ್ಯ ವಿಚಾರಣೆಯ ಪ್ಯಾರ 4 ರಲ್ಲಿ ಹೇಳಿದಂತೆ 4 ನೇ ವಿಭಾಗದಲ್ಲಿ ಸುಮಾರು 50,000/- ಸೈಟುಗಳು ಇವೆ ಎಂದು ಕಾಣಿಸಲಾಗಿದ್ದು ಆ ಕುರಿತು ನನಗೆ ನಿರ್ದಿಷ್ಟ ಮಾಹಿತಿ ಇರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ಯಾರ9 ರಲ್ಲಿ ಹೇಳಿದಂತೆ Nurm ಯೋಜನೆ ಅಡಿಯಲ್ಲಿ ಕಾರ್ಯಚರಣೆ ಕೈಗೊಂಡ ಕುರಿತು ನನಗೆ ಮಾಹಿತಿ ಇರುವುದಿಲ್ಲ. ಸದರಿ ಯೋಜನೆಯಲ್ಲಿ ಹಣವನ್ನು ಮರಳಿ ಕಳುಹಿಸಿದರೆ ನಗರಸಭೆಗೆ ದಂಡ ವಿಧಿಸಲಾಗುತ್ತದೆ ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ್ದೇನೆ ಎಂದರೆ ಸರಿ. ಆದ್ದರಿಂದ ನಗರಸಭೆಯ ಮೇಲ್ವಿಚಾರಣೆಯಲ್ಲಿ ವಾದಿಯ ದಾವಾ ಸ್ವತ್ತಿನಲ್ಲಿ ಕಾಮಗಾರಿಯನ್ನು ಕೈಗೊಂಡಿರುತ್ತೇವೆ ಎಂದರೆ ಸರಿಯಲ್ಲ.

ನಗರಸಭೆಯ ಅಧಿಕಾರಿಗಳು ನಿಪಿ 18ರಲ್ಲಿ ಕಾಣುವಂತೆ ದಾವಾ ಸ್ವತ್ತಿಗೆ ಹಾನಿಯುಂಟು ಮಾಡಿರುತ್ತಾರೆ ಎಂದರೆ ಸರಿಯಲ್ಲ. ವಾದಿಗೆ ತಿಳಿಯದಂತೆ ದಾವಾ ಸ್ವತ್ತಿನಲ್ಲಿ ಜೆ ಸಿ ಬಿ ಬಳಸಿಕೊಂಡು ಕಾಮಗಾರಿ ಮಾಡಲಾಗಿದೆ ಎಂದರೆ ಸರಿಯಲ್ಲ. ನಿಪಿ 22 ರಲ್ಲಿ ಕಾಣುತ್ತಿರುವ ಸ್ಥಳವು ದಾವಾ ಸ್ವತ್ತು ಆಗಿರುತ್ತದೆ ಎಂದರೆ ಸರಿಯಲ್ಲ. ಈಗಲೂ ದಾವಾ ಸ್ವತ್ತಿನಲ್ಲಿ ಚರಂಡಿ ನೀರು ನಿಂತು ಸ್ವತ್ತಿಗೆ ಹಾನಿಯುಂಟಾಗಿರುವುದನ್ನು ನಾನು ಪರಿಶೀಲನೆ ಮಾಡಿ ಬಂದಿದ್ದರು ಸಹಾ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತನ್ನು ಪರಿಶೀಲನೆ ಮಾಡಿ ಮುಖ್ಯ ವಿಚಾರಣೆಯನ್ನು ಸಲ್ಲಿಸಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಗರಸಭೆಯವರು ಯಾವುದೇ ನೋಟೀಸ್ ನೀಡದೆ ವಾದಿಯ ಸ್ವತ್ತಿನಲ್ಲಿ ಕಾಮಗಾರಿ ಕಾರ್ಯಚರಣೆ ಕೈಗೊಂಡ ಕಾರಣ ದಾವಾ ಸ್ವತ್ತು ತನ್ನ ಸ್ವರೂಪ ಕಳೆದುಕೊಂಡಿದ್ದು ವಾದಿಗೆ ಹಾನಿಯುಂಟಾಗಿರುತ್ತದೆ ಎಂದರೆ ಸರಿಯಲ್ಲ.

ಓಎಸ್. 266/2015 ಡಿಡಬ್ಲ್ಯೂ:2

ವಾದಿ ದಾವೆ ಹೂಡಿ ಆತನ ಪರವಾಗಿ ತಾತ್ಕಲಿಕ ತಡೆಯಾಜ್ಞೆ ಇದ್ದರು ಸಹಾ ಪುನಃ ನಾವು ದಾವಾ ಸ್ವತ್ತಿನಲ್ಲಿ ಕಾಮಗಾರಿ ಕೈಗೊಂಡು ದಾವಾ ಸ್ವತ್ತಿಗೆ ಹಾನಿಯುಂಟು ಮಾಡಿದ ಕಾರಣ ವಾದಿಯು ಪ್ರತ್ಯೇಕ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ. ವಾದಿಯು ಸ್ವತ್ತಿನ ಸಂರಕ್ಷಣೆಗಾಗಿ ತಂತಿ ಬೇಲಿ ಅಳವಡಿಸಿಕೊಂಡಿದ್ದು, ನಗರಸಭೆಯ ಅಧಿಕಾರಿಗಳು ಅದನ್ನು ನಾಶಪಡಿಸಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ವಾದಿಯು ಸ್ವಾಧೀನ ಮತ್ತು ಅನುಭೋಗವನ್ನು ಹೊಂದಿದ್ದು ನಗರಸಭೆ ಅಧಿಕಾರಿಗಳು ಅವರ ಸ್ವಾಧೀನಕ್ಕೆ ದಕ್ಕೆಯುಂಟು ಮಾಡಿರುತ್ತಾರೆ ಎಂದರೆ ಸಾಕ್ಷಿ ನಾನು ಸ್ಥಳ ಪರಿಶೀಲನೆ ಮಾಡಿದಾಗ ಅಂತಹ ಸಂಗತಿಗಳು ಕಂಡು ಬಂದಿರುವುದಿಲ್ಲ ಎಂದು ನುಡಿಯುತ್ತಾರೆ.

2015 ರಲ್ಲಿ ದಾವಾ ಸ್ವತ್ತಿಗೆ ಹಾನಿಯುಂಟಾಗಿದ್ದು ನಮ್ಮ ಕಚೇರಿಯಲ್ಲಿ ದಾಖಲೆಗಳು ಲಭ್ಯವಿದ್ದರು ಸಹಾ ನಾನು ಸತ್ಯ ಸಂಗತಿಯನ್ನು ಮರೆಮಾಚಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯ ಸಂಪೂರ್ಣ ಮಾಹಿತಿ ನನಗೆ ಇದ್ದು ನಗರಸಭೆಯವರು ವಾದಿಯ ಸ್ವಾಧೀನತೆಗೆ ದಕ್ಕೆಯುಂಟು ಮಾಡಿರುವುದು ಗೊತ್ತಿದ್ದು ನಗರಸಭೆಯ ಪರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇ ಒ.,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಚಾಮರಾಜನಗರ.